ತಿಂದುಂಡು ಠೊಣ್ಣವಾಗಿ ಬೆಳೆದ ಅದನ್ನು ಹಿಡಿದು ಕೊಯ್ಯುವ ವಿಷಯ ಬಂದಾಗೆಲ್ಲಾ ಚಿಕ್ಕಮ್ಮ ಬಲವಾಗಿ ವಿರೋಧಿಸುತ್ತಿದ್ದಳು. ಅತ್ತೂ ಕರೆದು ರಂಪಾಟವನ್ನೇ ಎಬ್ಬಿಸಿ ಬಿಡುತ್ತಿದ್ದಳು. ಹೀಗಾಗಿ ಅದನ್ನು ಹಲಾಲ್ ಮಾಡುವ ಅನೇಕ ಸಂದರ್ಭಗಳು ಕೈತಪ್ಪಿ ಹೋದವು. "ಹುಂಜ ಇನ್ನು ಕೊಯ್ದರೆ ತಿನ್ನೋಕೆ ರುಚಿ ಇರಲ್ಲ. ಬೆಂಡು ಬಂದು ಮಾಂಸ ರಬ್ಬರಿನಂತೆ ನಾರಾಗಿರುತ್ತೆ. ಜಗಿಯೋದೆ ಕಷ್ಟ" ಎಂದು ನಾವೆಲ್ಲಾ ನಿರಾಕರಿಸುವ ಮಾತುಗಳನ್ನು ಆಡಿದಾಗ ಚಿಕ್ಕಮ್ಮನಿಗೆ ಅತೀವ ಸಂತಸವಾಗಿತ್ತು. ಅಂತೂ ವಧೆಯಾಗುವ ಛಾನ್ಸಿನಿಂದ ಹುಂಜ ಶಾಶ್ವತವಾಗಿ ತಪ್ಪಿಸಿಕೊಂಡಿತು. ಹುಂಜಪ್ಪನ ಮಕ್ಕಳಿಗೆ ಮೊಮ್ಮಕ್ಕಳಾಗಿ, ಆ ಮೊಮ್ಮಕ್ಕಳಿಗೆ ಮರಿ ಮಕ್ಕಳಾಗಿ ಅವರನ್ನೆಲ್ಲಾ ಕೊಂದು ತಿಂದರೂ ಚಿಕ್ಕಮ್ಮನ ಹುಂಜ ಮಾತ್ರ ಜಬರದಸ್ತಾಗಿಯೇ ಬದುಕಿತ್ತು.

ಒಂದು ದಿನ ಗದ್ದೆಯ ಭತ್ತದ ಸಾಲಿನಲ್ಲಿ ತನ್ನ ಪ್ರಿಯತಮೆಗಳ ಜೊತೆ ಹೋದ ಹುಂಜಪ್ಪ ಮನೆಗೆ ಬರಲೇ ಇಲ್ಲ. ಅದು ಮನೆಗೆ ಬಾರದ ಕಾರಣ ಚಿಕ್ಕಮ್ಮ ಊಟ ಬಿಟ್ಟು ಕೂತರು. ಕತ್ತಲಲ್ಲೇ ಹೊಲ, ತೋಟ, ಹಳ್ಳ ಎಲ್ಲಾ ಕಡೆ ಹುಡುಕಿದರೂ ಅದು ಸಿಗಲಿಲ್ಲ. ಚಿಕ್ಕಮ್ಮನ ಅಳು ನಿಲ್ಲಲಿಲ್ಲ. ಮುಂಗುಸಿ ಹಿಡಿದಿರಬಹುದೇ, ಹಾವು ಕಚ್ಚಿರಬಹುದೇ, ತೋಳಗಳು ಎಗರಿಸಿದವೇ? ಅಷ್ಟೊಂದು ದಷ್ಟಪುಷ್ಟವಾಗಿ ಪೈಲ್ವಾನನಂತಿದ್ದ ಆ ಹುಂಜ ಹೋಗಿದ್ದಾರೂ ಎಲ್ಲಿಗಿರಬಹುದು ಎಂಬುದು ಯಾರಿಗೂ ತಿಳಿಯಲಿಲ್ಲ. ಮನೆಯ ಹತ್ತಿರ ಬಂದವರ ಬಳಿಯೆಲ್ಲಾ ಚಿಕ್ಕಮ್ಮ ವಿಚಾರಿಸಿ ವಿಚಾರಿಸಿ ಸುಸ್ತಾದರು.

ಮನೆ ಮಗನೇ ಸತ್ತು ಹೋದಷ್ಟು ದುಃಖ ಮನೆಯಲ್ಲಿ ಆವರಿಸಿತ್ತು. ವಾರವಾದರೂ ಅದರ ಸುಳಿವು ಸಿಗಲಿಲ್ಲ. ತಮ್ಮ ಪತಿ ಕಾಣೆಯಾದರೂ ಯಾವುದೇ ಖಬರಿಲ್ಲದೆ ಅದರ ಸಖಿ ಹ್ಯಾಟೆಗಳು ಸುಖವಾಗಿ ಉಂಡು ಓಡಾಡಿಕೊಂಡಿರುವುದು ಕಂಡು ಚಿಕ್ಕಮ್ಮನಿಗೆ ಸಿಟ್ಟು ಬರುತ್ತಿತ್ತು. ಆ ಬಿನ್ನಾಣಗಿತ್ತಿಯರ ಮುಖಕ್ಕೆ ಉಗಿದು, "ಥೂ ರಂಡೇರ ಒಂಚೂರು ನಾಚ್ಕೆ ಇಲ್ವಲ್ರೆ. ಕಣ್ಣಲ್ಲಿ ಕಣ್ಣಿಟ್ಟು ನನ್ನ ಮಗ ನಿಮ್ಮನ್ನ ಆಡಿಸ್ಕೊಂಡು ಇದ್ನಲ್ಲೆ. ಎಲ್ಲೋ ಕರ್ಕೊಂಡೋಗಿ ಬಿಟ್ ಬಂದೀರಲ್ಲೇ ಹಾದರಗಿತ್ತೀರಾ. ನಿಮ್ ಮುಖಕ್ಕೆ ರಾವ್ ಬಡಿಯಾ, ನಿಮಗ್ ಬರಬಾರ್ದು ಬರಾ, ನಿಮ್ ಮಕ ಸುಡಾ. ಈಗ್ ಯಾರ್ ಜೊತೆ ವಕ್ತಾನ ಮಾಡ್ತಿರೇ ಬೋಸೋಡಿ ಮುಂಡೇರಾ" ಎಂದೆಲ್ಲಾ ಬೈಯ್ಯತೊಡಗಿದಳು. ಇವಳ ಭಾಷೆ, ಭಾವನೆಗಳ ಕಿಂಚಿತ್ತೂ ಅರಿಯದ ಹೆಂಗೋಳಿಗಳು ಹೊಸ ಹುಂಜಗಳ ಜೊತೆ ಹಾಕಿಕೊಂಡು ಸಮಾಧಾನ ಚಿತ್ತದಿಂದ ನೆಲ ಕೆದಕುತ್ತಿದ್ದವು.

ಭತ್ತದ ಪೈರು ಕಟಾವಾದ ಮೇಲೆ ಬದುವಿನ ಮೇಲೆ ಎತ್ತು ಮೈಯಿಸುತ್ತಿದ್ದ ದಾಸಣ್ಣ ಒಂದು ದಿನ ಓಡೋಡಿ ಬಂದನು. ಅವನ ಕೈಯಲ್ಲಿ ಹುಂಜದ ಕೆಲ ಪುಕ್ಕಗಳಿದ್ದವು. "ಬೂವಮ್ಮ ನಿಮ್ ಹುಂಜದ ಪುಕ್ಕಳ ಅಲ್ಲಿ ಬಿದ್ದಿದ್ವು ನೋಡು. ಭತ್ತದ ಕಟಾವಿಗೆ ಬಂದೋನೆ ಯಾರೋ ಸೂ... ಮಗಾ, ಸರಕ್ಕಂತ ಹುಂಜದ ಕತ್ತು ಕೋಯ್ದು ಚೀಲದಲ್ಲಿ ಸುತ್ತಾಕಿಕೊಂಡು ಹೋಗಿದ್ದಾನೆ. ಕತ್ತು ಕೋಯ್ದ್ ಮ್ಯಾಗೆ ಅದಾನ ಏನ್ ಕೂಗೀತು. ಅದ್ಕೆ ಅದರ ಶಬ್ದಾನೂ ಬಂದಿಲ್ಲ" ಎಂದು ಸಿಐಡಿಯಂತೆ ವರ್ತಮಾನ ಕೊಟ್ಟನು.

ಇಷ್ಟೊಂದು ನಿಖರವಾಗಿ ನಡೆದ ಕಥೆ ಹೇಳುತ್ತಿರುವ ದಾಸಣ್ಣನೇ ಯಾಕೆ 'ಕೊಂಯ್' ಅನ್ನಿಸಿರಬಾರದು ಎಂಬಂತೆ ಚಿಕ್ಕಮ್ಮ ಅವನನ್ನೇ ದುರುಗುಟ್ಟಿ ನೋಡಿದಳು. ಇದನ್ನರಿತ ದಾಸಣ್ಣ "ಥೋ ನಿಮ್ ಅಲ್ಲಾ ದೇವ್ರು ಮೇಲಾಣೆ. ಸತ್ಯವಾಗ್ಲೂ ನಾನು ಇಂಥ ಹೇಸಿಗೆ ತಿನ್ನೋ ಕೆಲ್ಸ ಮಾಡ್ತೀನ ಬೂವಮ್ಮ. ತಿನ್ನಂಗಾಗೈತಿ ಅಂದ್ರೆ ನೀವೆ ಒಂದು ಹಿಡ್ಕೊಡ್ತಿರ. ಅಂಥದ್ರಾಗೆ ದೇವ್ರಿಗೆ ಬಿಟ್ಟ ಹುಂಜ ನಾನು ಹಿಡಿತೀನ" ಎಂದು ಸಮಜಾಯಿಷಿ ಕೊಟ್ಟನು. ನಮ್ಮ ಆ ಹುಂಜಜ್ಜನನ್ನು ದಾಸಣ್ಣ